# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2023 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2023 Model Paper

---

**ತರಗತಿ : 8** | **ವಿಷಯ : ಪ್ರಥಮ ಭಾಷೆ ಕನ್ನಡ** | **ಅಂಕಗಳು : 40**
**ಸಮಯ : 2 ಗಂಟೆ**

---

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | – | |
| 10 | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I. 1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(20 x 1 = 20)**

**1. ಒಂದು ಊರಿನಲ್ಲಿ ಒಬ್ಬಳು ಮುದುಕಿಯಿದ್ದಳು – ಈ ವಾಕ್ಯದಲ್ಲಿ 'ಊರು' ಎಂಬುದು,**

A. ರೂಢನಾಮ B. ಅಂಕಿತನಾಮ

C. ಅನ್ವರ್ಥನಾಮ D. ಸರ್ವನಾಮ

ಉತ್ತರ : ______

**2. ಬಾಲಕನು ತಂದೆಯನು ಕರೆತರುವೆನೆಂದನು – ಈ ವಾಕ್ಯದ ಲಿಂಗರೂಪ,**

A. ಸ್ತ್ರೀಲಿಂಗ B. ಪುಲ್ಲಿಂಗ

C. ನಪುಂಸಕ ಲಿಂಗ D. ಸ್ತ್ರೀನಪುಂಸಕ ಲಿಂಗ

ಉತ್ತರ : ______

**3. ಅವರು ಶಾಲೆಗೆ ಹೋದರು – ಈ ವಾಕ್ಯದ ಏಕವಚನ ರೂಪ,**

A. ನೀವು ಶಾಲೆಗೆ ಹೋದಿರಿ. B. ಅವು ಶಾಲೆಗೆ ಹೋದವು

C. ನಾವು ಶಾಲೆಗೆ ಹೋದೆವು D. ಅವನು ಶಾಲೆಗೆ ಹೋದನು

ಉತ್ತರ : ______

**4. ಬಭ್ರುವಾಹನನು ಕುದುರೆಯನ್ನು ಕಟ್ಟಿ ಹಾಕಿದ್ದರಿಂದ ಅವನಿಗೂ ಅರ್ಜುನನಿಗೂ ಯುದ್ಧ ನಡೆಯಿತು – ಇದು ವಾಕ್ಯದ ಈ ಪ್ರಕಾರ,**

A. ಸಾಮಾನ್ಯ ವಾಕ್ಯ B. ಸಂಯೋಜಿತ ವಾಕ್ಯ

C. ಮಿಶ್ರವಾಕ್ಯ D. ಪ್ರಶ್ನಾರ್ಥಕ ವಾಕ್ಯಉತ್ತರ

______

**5. ವಿದ್ಯಾರ್ಥಿಯು ಶಾಲೆಯಲ್ಲಿ ಹಗಲುಗನಸು ಕಾಣಬಾರದು, ಈ ವಾಕ್ಯದಲ್ಲಿನ ಹಗಲುಗನಸು ಪದವು,**

A. ದ್ವಿಗು ಸಮಾಸ B. ತತ್ಪುರುಷ ಸಮಾಸ

C. ದ್ವಂದ್ವ ಸಮಾಸ D. ಗಮಕ ಸಮಾಸ

ಉತ್ತರ : ______

6. **ಮಕ್ಕಳು ದೀಪಾವಳಿಗೆ ಅಂಗಡಿಯಿಂದ ಪಟಾಕಿಯನ್ನು ತರುತ್ತಾರೆ. – ಈ ವಾಕ್ಯದಲ್ಲಿ ಚತುರ್ಥೀ ವಿಭಕ್ತಿ ಪ್ರತ್ಯಯ ಹೊಂದಿರುವ ಪದ :**

A. ದೀಪಾವಳಿಗೆ  B. ಪಟಾಕಿಯನ್ನು

C. ಅಂಗಡಿಯಿಂದ  D. ಮಕ್ಕಳು

ಉತ್ತರ : ______

7. **ಕಬ್ಬಿಗನು ಕಾವ್ಯವನ್ನು ವಿನೋದಕ್ಕಾಗಿ ವಿಸ್ತಾರವಾಗಿ ರಚಿಸಿದನು – ಈ ವಾಕ್ಯದಲ್ಲಿರುವ ತದ್ಭವ ರೂಪದ ಪದ :**

A. ಕಬ್ಬಿಗ  B. ಕಾವ್ಯ

C. ವಿನೋದ  D. ವಿಸ್ತಾರ

ಉತ್ತರ : ______

8. **ಆಚಾರಕ್ಕರಸಾಗು ನೀತಿಗೆ ಪ್ರಭುವಾಗು**
**ಮಾತಿನಲಿ ಚೂಡಾಮಣಿಯಾಗು ನನಕಂದ**
**ಜ್ಯೋತಿಯೇ ಆಗು ಜಗಕ್ಕೆಲ್ಲ.**

**– ಈ ಪದ್ಯದ ಸಾಹಿತ್ಯ ಪ್ರಕಾರ :**

A. ದ್ವಿಪದಿ  B. ಚೌಪದಿ

C. ತ್ರಿಪದಿ  D. ಷಟ್ಪದಿ

ಉತ್ತರ : ______

9. **"ಹುಲಿಯೊಂದನ್ನು ಗಾಡಿಯವನೊಬ್ಬ ನೋಡ್ತಾನೆ" – ಈ ವಾಕ್ಯದಲ್ಲಿ 'ನೋಡ್ತಾನೆ' ಎಂಬ ಪದದ ಗ್ರಾಂಥಿಕ ರೂಪ :**

A. ನೋಡುತ್ತಾನೆ  B. ನೋಡುತ್ತೇನೆ

C. ನೋಡಿದನು  D. ನೋಡಿದೆನೆ

ಉತ್ತರ : ______

10. **"ಕಾಯಕವೇ ಕೈಲಾಸ" – ಈ ವಾಕ್ಯದಲ್ಲಿ 'ಕಾಯಕ' ಎಂಬ ಪದದ ಅರ್ಥ :**

A. ದೇಹ  B. ಗುರು

C. ಕಾಗೆ  D. ಕೆಲಸ

ಉತ್ತರ : ______

**11. ಕಾರ್ಯಕ್ರಮ ನಿರೂಪಣಾ ಹಂತಗಳ ಅನುಕ್ರಮ ರೂಪ :**

A. ವಂದನಾರ್ಪಣೆ, ಪ್ರಾರ್ಥನೆ, ಭಾಷಣ, ಸ್ವಾಗತ

B. ಸ್ವಾಗತ, ವಂದನಾರ್ಪಣೆ, ಪ್ರಾರ್ಥನೆ ಭಾಷಣ

C. ಪ್ರಾರ್ಥನೆ, ಸ್ವಾಗತ, ಭಾಷಣ, ವಂದನಾರ್ಪಣೆ

D. ಭಾಷಣ, ಸ್ವಾಗತ ಪ್ರಾರ್ಥನೆ, ವಂದನಾರ್ಪಣೆ

ಉತ್ತರ : ______

**12. ಈ ಕೆಳಗಿನ ಗದ್ಯಭಾಗವನ್ನು ಓದಿ ಮೌಲ್ಯವನ್ನು ಗುರ್ತಿಸಿ :**

**ದೇವರು ಎಲ್ಲೆಡೆ ಸಿಗಲಾರದ ಕಾರಣ ತಾಯಿಯನ್ನು ಸೃಷ್ಟಿಸಿದ. ಪ್ರತಿ ಮಕ್ಕಳು ಅಮ್ಮನ ಬೆಚ್ಚನೆಯ ಮಡಿಲಲ್ಲಿ ವಾತ್ಸಲ್ಯವನ್ನು ಅನುಭವಿಸಿದವರೆ, ನಾವು ಎಷ್ಟೇ ದೊಡ್ಡವರಾಗಿ ಸ್ವತಂತ್ರ ಬದುಕು ಕಟ್ಟಿಕೊಂಡರೂ ಅಮ್ಮನ ಕೈತುತ್ತು, ತೋರಿದ ಪ್ರೀತಿ, ಕಲಿಸಿದ ಪಾಠ, ಹಾಕಿಕೊಟ್ಟ ಹಾದಿ ಎಲ್ಲವೂ ನಮಗೆ ದಾರಿದೀಪ. ಹೀಗಾಗಿ ವಯಸ್ಸಾದ ತಂದೆ–ತಾಯಿಗಳನ್ನು ಪ್ರೀತಿಯಿಂದ ನೋಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ ಎಂಬುದನ್ನು ಮರೆಯಬಾರದು.**

A. ತಂದೆ–ತಾಯಿಯರಿಗೆ ದಾರಿ ದೀಪ

B. ಮಕ್ಕಳ ಮೇಲಿನ ಕಾಳಜಿ

C. ತಂದೆ ತಾಯಿಗಳಿಗೆ ಅಗೌರವ

D. ತಂದೆ–ತಾಯಿಗಳ ಮೇಲಿನ ಗೌರವ

ಉತ್ತರ : ______

**13. ಈ ಕೆಳಗಿನ ನಾಟಕ ಭಾಗವನ್ನು ಓದಿ ಉತ್ತರವನ್ನು ಗುರ್ತಿಸಿ :**

**ತಾತ : ದೀಪ ಏಕೆ ಹಚ್ಚುತ್ತಾರೆ? ವಿಚಾರ ಮಾಡಿ ಯಾರಾದರು ಹೇಳುವಿರಾ?**
**ಗೋಪಿ : ದೀಪ ಎಂದರೆ ಬೆಳಕು ಅದು ಜ್ಞಾನದ ಸಂಕೇತ.**
**ತಾತ : ಚೆನ್ನಾಗಿ ತಿಳಿದುಕೊಂಡಿರುವೆ, ನಿಮ್ಮ ಮನೆಯಲ್ಲಿ ಯಾವಯಾವ ಹಬ್ಬಗಳನ್ನು ಆಚರಿಸುತ್ತಾರೆ?**
**ಗೋಪಿ : ದಸರಾ, ದೀಪಾವಳಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.**

**ಇಲ್ಲಿ ದೀಪದ ಸಂಕೇತ,**

A. ಹಬ್ಬ

B. ದಸರಾ

C. ಜ್ಞಾನ

D. ಬಣ್ಣ

ಉತ್ತರ : ______

**14. ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದಾಗ ಗುರುಗಳು ಬೆನ್ನು ತಟ್ಟಿದರು. – ಈ ವಾಕ್ಯದಲ್ಲಿ 'ಬೆನ್ನು ತಟ್ಟು' ಎಂಬ ನುಡಿಗಟ್ಟಿನ ಅರ್ಥ :**

A. ದ್ವೇಷ ಸಾಧಿಸು

B. ಪ್ರೋತ್ಸಾಹಿಸು

C. ಸಮಯಸಾಧಿಸು

D. ಮೋಸಮಾಡು

ಉತ್ತರ : ______

15. ಎನ್ನೊಳಂತಿದು ಪಾಸುವೊಕ್ಕು – ಈ ಸಾಲಿನ ಹೊಸಗನ್ನಡ ರೂಪ,

A. ನನ್ನಲ್ಲಿ ಇದು ಹಾಸಿಗೆಯಾಗಿದೆ
B. ನನ್ನಲ್ಲಿ ಹಾಗೆ ಇದು ಹಾಸುಹೊಕ್ಕಾಗಿದೆ.
C. ನನ್ನಲ್ಲಿ ಇದು ಹಸನಾಗಿದೆ.
D. ನನ್ನಲ್ಲಿ ಅದು ಹಳಸಿದೆ

ಉತ್ತರ : ______

16. ಆಟೋರಿಕ್ಷಾ ಹತ್ತುವುದಕ್ಕಿಂತ ಮುಂಚೆ "ಸ್ವಲ್ಪ ನಿಧಾನವಾಗಿ ಓಡಿಸಪ್ಪ, ಇನ್ನೂ 50 ಪೈಸೆ, ಜಾಸ್ತಿ ಕೊಡುತ್ತೇನೆ. ನನಗೆ ವಯಸ್ಸಾಗಿದೆ. ಎತ್ತಿ ಹಾಕುವುದನ್ನು ತಡೆದುಕೊಳ್ಳಲು ಆಗುವುದಿಲ್ಲ" ಅಂತ ಒಮ್ಮೆ ಅಂದೆ. "ರೀ ಸ್ವಾಮಿ ಸುಮ್ಮನೆ ಕುಳಿತುಕೊಳ್ಳಿ ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು ಹತ್ತುವುದಕ್ಕಿಂತ ಮುಂಚೆನೆ ಅಪಶಕುನ. ಎಂದು ಸಿಡುಕಾಡಿ ಸ್ಟಾರ್ಟ್ ಮಾಡಿದ.

ಈ ಲೇಖನ ಭಾಗದ ಸಾಹಿತ್ಯದ ಪ್ರಕಾರ,

A. ಜೀವನ ಚರಿತ್ರೆ
B. ಆತ್ಮಚರಿತ್ರೆ
C. ನಾಟಕ
D. ಕಥನ ಕವನ

ಉತ್ತರ : ______

17. 'ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸಿದಾದೆವು ನಮ್ಮೊಳಗೆ'

ಈ ಪದ್ಯಭಾಗದ ಆಶಯ

A. ಕಲ್ಲಿನ ಮಹತ್ವ
B. ಪ್ರೀತಿ–ಸ್ನೇಹಗಳ ಮಹತ್ವ
C. ದೇವರ ಮಹತ್ವ
D. ಮಣ್ಣಿನ ಮಹತ್ವ


ಉತ್ತರ : ______

18. ಆಶ್ರಮದ ಮುನಿಯು ಶಿಷ್ಯರನ್ನು ನೋಡಿ ಮುನಿಸಿಕೊಂಡನು. – ಈ ವಾಕ್ಯದಲ್ಲಿನ 'ಮುನಿ' ಎಂಬ ಪದದ ನಾನಾರ್ಥಕ ಪದಗಳು :

A. ಋಷಿ – ಕೋಪ
B. ಋಷಿ – ಒಪ್ಪಿಗೆ
C. ಕೋಪ – ಮನೆ
D. ಕೋಪ – ಆಶ್ರಮ

ಉತ್ತರ : ______

19. **ಈ ಚಿತ್ರದ ಸೂಕ್ತವಾದ ಸಂದೇಶ :**



A. ರಸ್ತೆಗಳಲ್ಲಿ ಒಕ್ಕಲು ಮಾಡಬಾರದು

B. ರಸ್ತೆಯಲ್ಲಿ ಒಕ್ಕಲು ಮಾಡಬೇಕು

C. ರಸ್ತೆಯಲ್ಲಿ ವಾಹನವನ್ನು ಓಡಿಸಬಾರದು

D. ರಸ್ತೆಯಲ್ಲಿ ಒಕ್ಕಲು ಮಾಡಿ ಗಾಡಿ ಓಡಿಸುವುದು

ಉತ್ತರ : ______

20. **ಶುದ್ಧರೂಪದ ವಾಕ್ಯವನ್ನು ಗುರುತಿಸಿ,**

A. ಅರಮನೆಯಲ್ಲಿ ವಿಶೇಸ ಪದಾರ್ಥಗಳನ್ನು ಇಡಲಾಗಿತ್ತು

B. ಅರಮನೆಯಲ್ಲಿ ವಿಷೇಶ ಪದಾರ್ಥಗಳನ್ನು ಇಡಲಾಗಿತ್ತು.

C. ಅರಮನೆಯಲ್ಲಿ ವಿಶೇಷ ಪಧಾರ್ಥಗಳನ್ನು ಇಡಲಾಗಿತ್ತು.

D. ಅರಮನೆಯಲ್ಲಿ ವಿಶೇಷ ಪದಾರ್ಥಗಳನ್ನು ಇಡಲಾಗಿತ್ತು.

ಉತ್ತರ : ______

**II. 21 ರಿಂದ 28 ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.**

21. **ಕಾಗೆಯಮರಿ ಕೋಗಿಲೆಯಾಗಬಲ್ಲುದೆ?**
**ಆಡಿನಮರಿ ಆನೆಯಾಗಬಲ್ಲದೆ ?**
**ಸೀಳು ನಾಯಿ ಸಿಂಹದ ಮರಿಯಾಗಬಲ್ಲುದೆ?**
**ಅರಿವು ಆಚಾರ ಸಮ್ಯಜ್ಞಾನವನರಿಯದೆ**
**ನಾಮವ ಹೊತ್ತುಕೊಂಡು ತಿರುಗುವ ಗಾವಿಲರ**
**ಮುಖವ ನೋಡಲಾಗದು ಆಮುಗೇಶ್ವರಾ.**

**ವಚನದಲ್ಲಿ ಗಾವಿಲರನ್ನು ಯಾವ ನಿದರ್ಶನಗಳ ಮೂಲಕ ಅರ್ಥೈಸಲಾಗಿದೆ?** **2 ಅಂಕ**

______

______

______

______

22. ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ ।
ಸುತನೇ ಸದ್ಗತಿದಾತನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥

ಈ ಮೇಲಿನ ಸಾಲುಗಳನ್ನಾಧರಿಸಿ ಸುವ್ರತಿ, ಸುತ, ವಿದ್ಯೆಯ ಲಕ್ಷಣಗಳನ್ನು ಬರೆಯಿರಿ. 2 ಅಂಕ

23. "ಮಾನವನ ಬದುಕಿನಲ್ಲಿ ಬಾಲ್ಯ ಕಟ್ಟಿಕೊಡುವ ನೆನಪು ಅಪಾರ ಹಾಗೂ ಅಮೋಘ, ಬಾಲ್ಯದ ಈ ನೆನಪಿನಂಗಳದಲ್ಲಿ ತುಂಬಿ ಬರುವ ಈ ನೆನಪಿನ ಬುತ್ತಿಯು ಬದುಕಿನುದ್ದಕ್ಕೂ ಮುಗಿಯದ ಅಕ್ಷಯಪಾತ್ರೆಯಾಗಿರುತ್ತದೆ" ಬಾಲ್ಯದ ನೆನಪುಗಳ ಬಗೆಗೆ ನಿಮ್ಮ ಅನಿಸಿಕೆಯನ್ನು ಬರೆಯಿರಿ. 2 ಅಂಕ

24. "ಅತಿಯಾಸೆ ಗತಿಗೆಡಿಸಿತು" – ಈ ಗಾದೆ ಮಾತನ್ನು ಅರ್ಥೈಸಿ ಬರೆಯಿರಿ. 2 ಅಂಕ

25. ನಿಮ್ಮ ಶಾಲೆಯಲ್ಲಿ ಆಚರಿಸಿದ ಗಾಂಧಿಜಯಂತಿಯನ್ನು ಕುರಿತು ಮೂರು ಸಾಲುಗಳನ್ನು ಬರೆಯಿರಿ. 2 ಅಂಕ

26. ಈ ಕೆಳಗಿನ ಚಿತ್ರವನ್ನು ಗಮನಿಸಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ. 3 ಅಂಕ



27. ನಿಮ್ಮನ್ನು ವಿಜಯಪುರ ಜಿಲ್ಲೆಯ ಬಂಧನಾಳ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಸುಮನ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು ನಾಲ್ಕು ದಿನ ರಜೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. 3 ಅಂಕ

**28** ಈ ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ : 4 ಅಂಕ

"ಇಪ್ಪತನೆಯ ಶತಮಾನದ ಪೂರ್ವಾರ್ಧ ಕೋಲಾರ ತಾಲೂಕು ಜಮಾಬಂದಿ ಸಮಯ. ಅಧಿಕಾರಿಯ ಮುಂದೆ ತಪ್ಪಿತಸ್ಥ ರೈತನೊಬ್ಬ ನಿಂತಿದ್ದ ಆ ರೈತನಿಗೆ ಹೀಗೆ ಮಾಡಬಾರದು ಅಂತ ನಿನಗೆ ತಿಳಿದಿರಲಿಲ್ಲವಾ?" ಎಂದು ಹೇಳಿದರು. ಆಗ 'ಇಲ್ಲ ಬುದ್ದಿ' ಎಂದನು, "ರೈತ ಕಾನೂನು ತಿಳಿಯದೇ ತಪ್ಪು ಮಾಡಿದರೂ ಅಪರಾಧವೇ, ರೂಲ್ಸ್ ಯಾಕೆ ತಿಳಿದುಕೊಳ್ಳಲಿಲ್ಲ?' ಎಂದು ಅಧಿಕಾರಿಯು ರೈತನನ್ನು ಪ್ರಶ್ನಿಸಿದನು. ಅದಕ್ಕೆ ರೈತ "ನಿಮ್ಮ ರೂಲ್ಸು ಎಲ್ಲಾ ಇಂಗ್ಲೀಷಿನಲ್ಲಿದೆ ಸ್ವಾಮಿ, ನಾವೇನು ತಿಳ್ಕೊಳ್ಳೋದು?" ಎಂದನು. ರೈತನ ಇದೊಂದು ಪ್ರಶ್ನೆಯು ಅಧಿಕಾರಿಯ ಮೇಲೆ ಪ್ರಚಂಡ ಪರಿಣಾಮವನ್ನು ಬೀರಿತು. ಗ್ರಾಮಗಳ ಜನರ ಬೆವರಿನಿಂದ ಪಡೆದ ತೆರಿಗೆ ಹಣದಲ್ಲಿ ಸರ್ಕಾರ ನಡೆಸುವ ನಾವು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಸರಳ ಕಾಯಿದೆಯನ್ನು ತಿಳಿಯಲು ಬೇರೆಯವರನ್ನು ಅವಲಂಬಿಸಬೇಕಲ್ಲ" ಎಂದು ಆಲೋಚಿಸಿ ಆ ದಿನದಿಂದಲೆ ಆಡಳಿತದಲ್ಲಿ ಕನ್ನಡವನ್ನು ತರಲು ಪ್ರಯತ್ನಿಸಿದರು.

ಪ್ರಶ್ನೆಗಳು :

1. ರೈತ ಕಾನೂನು ಪಾಲಿಸಲು ತೊಡಕಾಗಿದ್ದು ಏಕೆ ಯೋಚಿಸಿ, ಉತ್ತರಿಸಿ.

2. ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡವೇ ಆಗಿರಬೇಕೆಂಬುದನ್ನು ಸಮರ್ಥಿಸಿ ಬರೆಯಿರಿ.